ದಿನಾಂಕ 17.12.2012 ರಂದು ಬೆಳಿಗ್ಗೆ11.00 ಘಂಟೆಗೆ ನಿರ್ದೇಶಕರು(ಗ್ರಾಮೂಸೌ-೨) ಗ್ರಾಅಪ ಇಲಾಖೆ,ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಗ್ರಾಮೀಣ ಇಂಧನ ಕಾರ್ಯಕ್ರಮದ ಪರಿಶೀಲನಾ ಸಭೆಯ ನಡವಳಿಗಳು

**ಹಾಜರಿದ್ದವರು :**

1. ಶ್ರೀಮತಿ ಎಂ.ದೀಪಾ, ಭಾ.ಆ.ಸೇ, ನಿರ್ದೇಶಕರು(ಗ್ರಾಮೂಸೌ-2) ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ
2. ಎಲ್ಲಾ ಜಿಲ್ಲಾ ಪಂಚಾಯತ್‌ನ ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮದ ಯೋಜನಾ ಅಭಿಯಂತರರು(ಗದಗ ಮತ್ತು ಕೊಡಗು ಹೊರತುಪಡಿಸಿ)
3. ಉಪನಿರ್ದೇಶಕರು(ಜೈವಾನಿಲ), ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ

ಮೊಟ್ಟ ಮೊದಲು ಸಭೆಯಲ್ಲಿ ಭಾಗವಹಿಸಿದ್ದ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಸ್ವಾಗತಿಸಲಾಯಿತು.

1. ಸರ್ಕಾರದಿಂದ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ ಹಾಗೂ ಸೌರ ಬೆಳಕು ಯೋಜನೆಗಳಡಿ ನಿಗದಿತ ನಮೂನೆಗಳನ್ನು ಈಗಾಗಲೇ ನೀಡಲಾಗಿದೆ. ಆದರೆ ಕಾರ್ಯಕ್ರಮದಡಿ ಸಮರ್ಪಕ ಮಾಹಿತಿಯನ್ನು ಪಡೆಯುವ ನಿಟ್ಟಿನಲ್ಲಿ ಕಾರ್ಯಕ್ರಮದಡಿ ಪರಿಷ್ಕೃತ ನಮೂನೆಗಳನ್ನು ನೀಡಲಾಗುತ್ತಿದ್ದು, ಸದರಿ ಪರಿಷ್ಕೃತ ನಮೂನೆಗಳಲ್ಲಿ ಕಾರ್ಯಕ್ರಮದ ಕ್ರಿಯಾ ಯೋಜನೆ ಮತ್ತು ಪ್ರಗತಿ ವರದಿಗಳನ್ನು ಜಿಲ್ಲಾ ಪಂಚಾಯತ್ ವೆಬ್ ಸೈಟ್‌ನಲ್ಲಿ ಪ್ರತಿ ಮಾಹೆ ಕಾಲೋಚಿತಗೊಳಿಸುವುದು. ಹಾಗೂ ಕಾಲೋಚಿತಗೊಳಿಸಲಾದ ಮಾಹಿತಿಯನ್ನು ಇಲಾಖೆಯ ವೆಬ್‌ಸೈಟ್‌ಗೆ ಇ-ಮೇಲ್ ಐಡಿ ಮೂಲಕ ಹಾಗೂ ಹಾರ್ಡ್ ಪ್ರತಿಯೊಂದಿಗೆ ನಿಗದಿತ ದಿನಾಂಕದೊಳಗೆ ಕಳುಹಿಸುವುದು.

2. ಮುಂದುವರಿದು ಗ್ರಾಮೀಣ ಇಂಧನ ಕಾರ್ಯಕ್ರಮದಡಿ ಪ್ರಗತಿ ವರದಿಗಳನ್ನು Online ನಲ್ಲಿ ಕಾಲೋಚಿತಗೊಳಿಸುವಂತೆ ವೆಬ್‌ಸೈಟ್ ಡಿಸೈನ್ ಮಾಡುವ ಕುರಿತು National Informatic Centre ರವರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ಬಗ್ಗೆ ತೀರ್ಮಾನಿಸಲಾಯಿತು.

3. ಎಲ್ಲಾ ಜಿಲ್ಲಾ ಪಂಚಾಯತ್‌ಗಳು ಜಿಲ್ಲಾ ಪಂಚಾಯತ್ ವೆಬ್ ಸೈಟ್‌ನ್ನು ಹೊಂದಿದ್ದು, ಧಾರವಾಡ ಜಿಲ್ಲಾ ಪಂಚಾಯತ್ ಮಾತ್ರ ವೆಬ್‌ಸೈಟ್‌ನ್ನು ಹೊಂದಿಲ್ಲವೆಂದು ಯೋಜನಾ ಅಭಿಯಂತರರು ತಿಳಿಸಿರುವ ಹಿನ್ನೆಲೆಯಲ್ಲಿ ಜಿಲ್ಲೆಯ National Informatic Centre ನ್ನು ಸಂಪರ್ಕಿಸಿ, ಈ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಧಾರವಾಡ ರವರು ಕ್ರಮ ವಹಿಸುವುದು.

4. **ವಾರ್ಷಿಕ ಗುರಿ :** ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮದಡಿ 4 ತ್ರೈಮಾಸಿಕ ಗುರಿಯನ್ನು ಕೂಡಲೇ ಹಂಚಿಕೆ ಮಾಡಲಾಗುವುದು

5. SC Comp ರಡಿ ಪ್ರಸಕ್ತ ಸಾಲಿನಲ್ಲಿ ಕೇಂದ್ರ ಸಹಾಯಧನ ಬಿಡುಗಡೆಗಾಗಿ ನವ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯವನ್ನು ಪತ್ರ ಮುಖೇನ ಹಾಗೂ ಸಂಬಂಧಿತ ಅಧಿಕಾರಿಗಳನ್ನು ದೂರವಾಣಿ ಮೂಲಕ ಕೋರಲು ತೀರ್ಮಾನಿಸಲಾಯಿತು

6. ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಗೆ ಹೆಚ್ಚಿನ ಗುರಿ ನಿಗದಿ ಪಡಿಸುವಂತೆ ಕೋರಿದ್ದು, ಇದನ್ನು ಜನವರಿ 2013ರ ಮೊದಲ ವಾರದಲ್ಲಿ ಪ್ರಗತಿ ಪರಿಶೀಲಿಸಿ ಕ್ರಮ ವಹಿಸಲಾಗುವುದು.

7. ಪ್ರಸಕ್ತ ಸಾಲಿನಲ್ಲಿ ನಿಗದಿ ಪಡಿಸಿದ ಗುರಿ, ಸಾಧಿಸಿದ ಪ್ರಗತಿ, ಬಿಡುಗಡೆಯಾದ ಅನುದಾನ ( ಕೇಂದ್ರ ಹಾಗೂ ರಾಜ್ಯ) ಬಿಡುಗಡೆಗೆ ಬಾಕಿ ಇರುವ ಅನಿಲ ಸ್ಥಾವರಗಳ ಸಂಖ್ಯೆ ಹಾಗೂ ಕೇಂದ್ರ ಹಾಗೂ ರಾಜ್ಯ ಸಹಾಯಧನದ ವಿವರಗಳನ್ನು ನಿಗದಿತ ನಮೂನೆಯಲ್ಲಿ ಸರ್ಕಾರಕ್ಕೆ ಸಲ್ಲಿಸುವುದು.

8. ಪ್ರತಿ ಜಿಲ್ಲೆಯಲ್ಲಿನ ಟರ್ನ ಕೀ ವರ್ಕರ್ಸ್/ಏಜನ್ಸಿಯವರ ವಿವರಗಳನ್ನು ನೀಡುವಂತೆ ಸೂಚಿಸುತ್ತಾ ಟರ್ನ ಕೀ ವರ್ಕರ್ಸ್ ಹಾಗೂ ಗಾರೆ ಕೆಲಸಗಾರರಿಗೆ ತರಬೇತಿ ಪಡೆಯುವ ಅಗತ್ಯತೆ ಇದ್ದಲ್ಲಿ ಪೂರ್ಣ ವಿವರವನ್ನೊಳಗೊಂಡ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು.

9. ಜಿಲ್ಲೆಯಲ್ಲಿನ ನಗರ/ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ನಿರ್ಮಿಸಲಾಗುವ ಅನಿಲ ಸ್ಥಾವರಗಳಿಗೆ ಸಹಾಯಧನ ನೀಡುವ ಕುರಿತು ನವ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯದಿಂದ ಸ್ಪಷ್ಟೀಕರಣ ಕೋರುವ ಬಗ್ಗೆ ತೀರ್ಮಾನಿಸಲಾಯಿತು.

10. ಕಾರ್ಯಕ್ರಮದಡಿ ಬಿಡುಗಡೆಯಾದ ಅನುದಾನವನ್ನು ಬ್ಯಾಂಕ್ ಖಾತೆಯಲ್ಲಿರಿಸಿ ವ್ಯವಹರಿಸುವ ಅಥವಾ ಡಿ.ಸಿ ಬಿಲ್ಲು ಮೂಲಕ ವ್ಯವಹರಿಸಬಹುದಾದ ಕುರಿತು ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಪಡೆಯಬಹುದಾದ ಕುರಿತು ತೀರ್ಮಾನಿಸಲಾಯಿತು

**11. ಪ್ರಗತಿ ಪರಿಶೀಲನೆ :**

ಅ) ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಪ್ರಗತಿ ವರದಿಗಳನ್ನು ಪರಿಶೀಲಿಸಿದಾಗ, ಬಾಗಲಕೋಟೆ, ಬೆಳಗಾಂ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಹಾವೇರಿ, ಕೊಡಗು, ರಾಮನಗರ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲಾ ಪಂಚಾಯತ್ ಉತ್ತಮ ಪ್ರಗತಿ ಸಾಧಿಸಿದ್ದು, ಪೂರ್ಣ ಪ್ರಮಾಣದಲ್ಲಿ ಗುರಿಗನುಗುಣವಾಗಿ ಪ್ರಗತಿ ಸಾಧಿಸಲು ಸೂಚಿಸಲಾಯಿತು.

ಆ) ಬೀದರ್, ಬಿಜಾಪುರ, ಚಾಮರಾಜನಗರ, ದಕ್ಷಿಣ ಕನ್ನಡ, ಗುಲ್ಬರ್ಗಾ, ಹಾಸನ ಮೈಸೂರು, ಉಡುಪಿ, ಗದಗ, ಉತ್ತರ ಕನ್ನಡ, ರಾಯಚೂರು, ಯಾದಗೀರ್ ಜಿಲ್ಲೆಗಳ ಪ್ರಗತಿ ಬಹಳ ಕಡಿಮೆ ಇದ್ದು, ಈ ಬಗ್ಗೆ ತ್ವರಿತವಾಗಿ ಕ್ರಮವಹಿಸಿ ನಿಗದಿ ಪಡಿಸಿದ ಗುರಿಯನ್ನು ಪೂರ್ಣಗೊಳಿಸುವುದಾಗಿ ಯೋಜನಾ ಅಭಿಯಂತರರು ತಿಳಿಸಿರುತ್ತಾರೆ.

ಇ) ಬೆಂಗಳೂರು(ಗ್ರಾ), ಬೆಂಗಳೂರು(ನಗರ), ಕೋಲಾರ, ಬಳ್ಳಾರಿ, ಕೊಪ್ಪಳ ಮತ್ತು ಮಂಡ್ಯ ಜಿಲ್ಲಾ ಪಂಚಾಯತ್‌ಗಳ ಪ್ರಗತಿ ತೃಪ್ತಿಕರವಾಗಿರುವುದಿಲ್ಲ. ಈ ಕುರಿತು ಸಂಬಂಧಿತ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸೂಕ್ತ ಕ್ರಮಕೈಗೊಳ್ಳುವಂತೆ ತೀರ್ಮಾನಿಸಲಾಯಿತು.

12. ಗದಗ ಜಿಲ್ಲಾ ಪಂಚಾಯತ್‌ನಲ್ಲಿ ಯೋಜನಾ ಅಭಿಯಂತರರ ಲಭ್ಯತೆ ಇಲ್ಲದಿರುವುದರಿಂದ ಕಾರ್ಯಕ್ರಮದ ಅನುಷ್ಠಾನದ ಹಿತದೃಷ್ಟಿಯಿಂದ ಹಾವೇರಿ ಜಿಲ್ಲಾ ಪಂಚಾಯತ್‌ನಲ್ಲಿ ಗ್ರಾಮೀಣ ಇಂಧನ ಕಾರ್ಯಕ್ರಮದ ಉಸ್ತುವಾರಿ ನಿರ್ವಹಿಸುತ್ತಿರುವ ಶ್ರೀ.ಉತ್ತಮ ಕುಮಾರ್, ಯೋಜನಾ ಅಭಿಯಂತರರನ್ನು ಗದಗ ಜಿಲ್ಲಾ ಪಂಚಾಯತ್‌ನ ಗ್ರಾಮೀಣ ಇಂಧನ ಕಾರ್ಯಕ್ರಮದ ಉಸ್ತುವಾರಿ ನಿರ್ವಹಿಸಲು ಹೆಚ್ಚುವರಿ ಪ್ರಭಾರದಲ್ಲಿರಿಸಲು ತೀರ್ಮಾನಿಸಲಾಯಿತು.

12(ಅ) ಗುಲ್ಬರ್ಗಾ ಮತ್ತು ಯಾದಗೀರ್ ಜಿಲ್ಲಾ ಪಂಚಾಯತ್‌ಗಳಿಗೆ ಅನುಕ್ರಮವಾಗಿ ಬೀದರ್ ಹಾಗೂ ರಾಯಚೂರು ಜಿಲ್ಲಾ ಪಂಚಾಯತ್‌ಗಳಲ್ಲಿನ ಗ್ರಾಮೀಣ ಇಂಧನ ಕಾರ್ಯಕ್ರಮದ ಉಸ್ತುವಾರಿ ನಿರ್ವಹಿಸುತ್ತಿರುವ ಯೋಜನಾ ಅಭಿಯಂತರರಿಗೆ ಹೆಚ್ಚುವರಿ ಪ್ರಭಾರದಲ್ಲಿರಿಸಿ ಆದೇಶಿಸಲಾಗಿದ್ದರೂ ಸಹ ಸಂಬಂಧಿತ ಯೋಜನಾ ಅಭಿಯಂತರರು ಹೆಚ್ಚುವರಿ ಪ್ರಭಾರದಲ್ಲಿ ಕಾರ್ಯನಿರ್ವಹಿಸದೇ ಪರ್ಯಾಯ ವ್ಯವಸ್ಥೆಯಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳ ಕುರಿತು ಅನುಭವವಿಲ್ಲದ ವಿವಿಧ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಈ ಕುರಿತು ಸರ್ಕಾರದ ಆದೇಶದನ್ವಯ ಸಂಬಂಧಿತ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮ ವಹಿಸುವುದು.

12 (ಆ) ಶ್ರೀ.ಎಂ.ಎಸ್.ಸುದರ್ಶನ್, ಯೋಜನಾ ಅಭಿಯಂತರರು ಗದಗ ಜಿಲ್ಲಾ ಪಂಚಾಯತ್‌ನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಇರುವುದು ಸಭೆಯಲ್ಲಿ ಗಮನಿಸಲಾಗಿದ್ದು, ಈ ಕುರಿತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಗದಗ ರವರಿಂದ ವರದಿ ಪಡೆಯುವ ಕುರಿತು ತೀರ್ಮಾನಿಸಲಾಯಿತು .

14. **ಹಣಬಳಕೆ ಪ್ರಮಾಣ ಪತ್ರ** : 2011-12ನೇ ಸಾಲಿನಲ್ಲಿ ಕಾರ್ಯಕ್ರಮದ ಹಣಬಳಕೆ ಪ್ರಮಾಣ ಪತ್ರದಲ್ಲಿ ಕಂಡ ಬಂದ ವ್ಯತ್ಯಾಸ/ನ್ಯೂನತೆಗಳಿಗೆ ಪರಿಷ್ಕೃತ ಮಾಹಿತಿಯನ್ನು ಕೂಡಲೇ ಸಲ್ಲಿಸುವಂತೆ ದಾವಣಗೆರೆ, ರಾಮನಗರ, ಉಡುಪಿ, ಕೊಪ್ಪಳ, ಮಂಡ್ಯ ಮತ್ತು ಕೊಡಗು ಜಿಲ್ಲಾ ಪಂಚಾಯತ್‌ಗಳಿಗೆ ಸೂಚಿಸಲಾಯಿತು.

**15. ಸೌರಬೆಳಕು ಯೋಜನೆ :**

ಅ) 2011-12ನೇ ಸಾಲಿನಲ್ಲಿ ಕೊಪ್ಪಳ ಜಿಲ್ಲೆಯನ್ನು ಪ್ರಾಯೋಗಿಕ ಜಿಲ್ಲಾ ಪಂಚಾಯತ್ ಯನ್ನಾಗಿ ಮಾಡಲಾಗಿದ್ದು, ಇದುವರೆವಿಗೂ ಕಾರ್ಯಕ್ರಮದಡಿ ಇ-ಟೆಂಡರ್ ಪ್ರಕ್ರಿಯೆ ಅಂತಿಮಗೊಳಿಸದೇ ಇರುವುದು ಪರಿಶೀಲಿಸಲಾಗಿದ್ದು, ಕೂಡಲೇ ಅನುಷ್ಠಾನ ಕಾರ್ಯ ಕೈಗೊಂಡು ವರದಿ ನೀಡುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕೊಪ್ಪಳ ರವರಿಗೆ ಸೂಚಿಸಲು ತೀರ್ಮಾನಿಸಲಾಯಿತು.

ಆ) ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆ ಹಾಗೂ ಸೌರಬೆಳಕು ಯೋಜನೆಯಡಿ ಹೊರಡಿಸಲಾದ ಮಾರ್ಗಸೂಚಿ, ಸುತ್ತೋಲೆ, ಆದೇಶದನ್ವಯ ಎಲ್ಲಾ ಜಿಲ್ಲಾ ಪಂಚಾಯತ್‌ನ ಸಂಬಂಧಿತ ಅಧಿಕಾರಿಗಳು ವೈಯಕ್ತಿಕ ಗಮನಹರಿಸಿ ಕಾರ್ಯಕ್ರಮವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸೂಕ್ತ ಕ್ರಮವಹಿಸುವಂತೆ ತೀರ್ಮಾನಿಸಲಾಯಿತು.

ಈ ಮೇಲಿನ ತೀರ್ಮಾನ/ಸೂಚನೆಗಳನ್ವಯ ಕ್ರಮವಹಿಸುವಂತೆ ಮತ್ತೊಮ್ಮೆ ತಿಳಿಸುತ್ತಾ ಪರಿಶೀಲನಾ ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

19/12/12

(ಎಂ.ದೀಪಾ)
ನಿರ್ದೇಶಕರು(ಗ್ರಾಮೂಸೌ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಕಡತ ಸಂಖ್ಯೆ: ಗ್ರಾಅಪ 53 ಜೈಅಯೋ 2010(ಪಿ) ಬೆಂಗಳೂರು, ದಿನಾಂಕ 17.12.2012

ಗೆ:

1. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,

2. Director(Biogas Division), MNRE, Block No.14, CGO Complex, Lodhi Road, New Delhi 110003.

3. ಕಾರ್ಯನಿರ್ವಾಹಕ ನಿರ್ದೇಶಕರು, ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಜಕ್ಕೂರು ಬೆಂಗಳೂರು

4. ನಿರ್ದೇಶಕರು, SIRD, Mysore

5. ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

6. ಸಂಯೋಜಕರು, RBDTC, GKVK, Bangalore

7. ಎಲ್ಲಾ ಜಿಲ್ಲಾ ಪಂಚಾಯತ್‌ನ ಸಗ್ರಾಇಂಕಾ ಯೋಜನಾ ಅಭಿಯಂತರರಿಗೆ

8. ಸರ್ಕಾರದ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

9. ರಕ್ಷಾ ಕಡತಕ್ಕೆ /ಹೆಚ್ಚುವರಿ ಪ್ರತಿ